C.R.P.67

Form No.4 (Civil)
Deposition Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆ: 166/2020**

**ಪ್ರಾಸಾ. 1 ಚಾಸಾ. 1**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಚಿನ್ನಮ್ಮ |
| **ಗಂಡನ ಹೆಸರು** | : | ವೆಂಕಟಪ್ಪ |
| **ವಯಸ್ಸು** | : | 50 ವರ್ಷಗಳು |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸ** | : | ರಾಮನಗರ. |

**ಪ್ರಮಾಣ ವಚನ ಬೋಧಿಸಿದ ದಿನಾಂಕ: 04.07.2024**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಆತ ನನ್ನ ಅಳಿಯನಾಗಬೇಕು. ಆತ ನನ್ನ ಮಗಳು ಗೌರಮ್ಮನ ಗಂಡ. ಚಾಸಾ-2 ನನ್ನ ಯಜಮಾನ. ಚಾಸಾ-3 ನನ್ನ ಮಗ.

2. ನನಗೆ ಇಬ್ಬರೂ ಮಕ್ಕಳು ಅವರುಗಳೆಂದರೆ ಒಬ್ಬರು ಗೌರಮ್ಮ ಮತ್ತೊಬ್ಬ ಚಾಸಾ-3 ಕೆಂಪರಾಜು. ಆರೋಪಿಗೂ ಮತ್ತು ಗೌರಮ್ಮನಿಗೂ ಆಕೆ ತೀರಿಕೊಳ್ಳುವ ಸುಮಾರು 4 ವರ್ಷಗಳ ಹಿಂದೆ ಮುತ್ತತ್ತಿಯ ಹನುಮಂತನ ದೇವಸ್ಥಾನದಲ್ಲಿ ಮದುವೆ ಮಾಡಿರುತ್ತೇವೆ. ಮದುವೆ ಸಮಯದಲ್ಲಿ ಆರೋಪಿಗೆ ಒಡವೆ, ವಸ್ತ್ರ, ನಗದು ಏನನ್ನು ವರದಕ್ಷಿಣೆಯನ್ನಾಗಿ ಕೊಟ್ಟಿರಲಿಲ್ಲ. ಮದುವೆ ನಂತರ ನನ್ನ ಮಗಳು ಹಾಗೂ ನನ್ನ ಅಳಿಯ ಆರೋಪಿ ಇಬ್ಬರು ಲಕ್ಷ್ಮೀಪುರದ ನವಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ 1 ನೇ ಮಹಡಿಯಲ್ಲಿ ವಾಸವಿದ್ದರು. ಮದುವೆ ಆದ ಒಂದೆರಡು ವರ್ಷಗಳ ಕಾಲದವರೆಗೆ ಅವರಿಬ್ಬರೂ ಚೆನ್ನಾಗಿ ಇದ್ದರು.

3. ಆ ನಂತರ ಆರೋಪಿ ನನ್ನ ಮಗಳಿಗೆ ದುಡ್ಡು, ಕಾಸು, ಒಡವೆಯನ್ನು ನಿಮ್ಮ ತಂದೆ-ತಾಯಿಯಿಂದ ತೆಗೆದುಕೊಂಡು ಬಾ ಎಂದು ಕಿರುಕುಳ ಕೊಡಲು ಶುರುಮಾಡಿದ್ದನು. ಈ ವಿಚಾರವನ್ನು ನನ್ನ ಮಗಳೇ ಅವಳು ಬದುಕಿದ್ದಾಗ ನಮಗೆ ಹೇಳಿರುತ್ತಾಳೆ. ಆ ಸಂದರ್ಭದಲ್ಲಿ ಒಮ್ಮೆ ನಮ್ಮ ಸ್ತ್ರೀ ಶಕ್ತಿ ಸಂಘದಲ್ಲಿ ಸಾಲ ಮಾಡಿ ರೂ. 40,000/- ಹಣವನ್ನು ಆರೋಪಿಗೆ ಹೊಂದಿಸಿ ಕೊಟ್ಟಿರುತ್ತೇವೆ. ಆರೋಪಿಗೆ ನಾನು ಹಾಗೂ ನಮ್ಮ ಕೆಲವು ಸಂಬಂಧಿಕರು ನಮ್ಮ ಮಗಳಿಗೆ ಹೊಡಿಬೇಡ, ಹಿಂಸೆ ಮತ್ತು ಕಿರುಕುಳ ಕೊಡಬೇಡ ಮತ್ತು ಹಣಕ್ಕೆ ಪೀಡಿಸಬೇಡ ಎಂದು ಹೇಳಿರುತ್ತೇವೆ. ಆದರೆ ನಾವು ಹಣ ಕೊಟ್ಟರು, ಬುದ್ದಿವಾದವನ್ನು ಹೇಳಿದರು ಸಹ ಆರೋಪಿ ಸರಿ ಹೋಗಿರುವುದಿಲ್ಲ. ಆರೋಪಿ ತನ್ನ ಎಂದಿನ ಚಾಳಿಯನ್ನು ಮುಂದುವರೆಸಿಕೊಂಡು ಹೋಗಿರುತ್ತಾನೆ.

3. ಈಗ್ಗೆ 4 ವರ್ಷದ ಹಿಂದೆ ನನ್ನ ಮಗಳು ದೂರವಾಣಿ ಕರೆ ಮಾಡಿ, ದುಡ್ಡಿನ ವಿಚಾರವಾಗಿ ಗಲಾಟೆ ನಡೆಯುತ್ತಿರುವ ಬಗ್ಗೆ, ತೊಂದರೆಯಾಗುತ್ತಿರುವ ಬಗ್ಗೆ ಮೊದಲಿಗೆ ರಾತ್ರಿ 8.00 ಗಂಟೆಯ ಸಮಯದಲ್ಲಿ ತಿಳಿಸಿರುತ್ತಾಳೆ. ಆಗ ನಾನು ನನ್ನ ಮಗಳಿಗೆ, ಏನು ತೊಂದರೆ ಮಾಡಿಕೊಳ್ಳಬೇಡ, ಈಗ ಮಳೆ ಬರುತ್ತಿದೆ, ಬೆಳಗ್ಗೆ ಬರುತ್ತೇವೆ ಎಂದು ಹೇಳಿ ಸಮಾಧಾನ ಮಾಡಿರುತ್ತೇವೆ. ಆ ನಂತರ ಸುಮಾರು 10.00 ಗಂಟೆಯ ಸಂದರ್ಭದಲ್ಲಿ ನನ್ನ ಅಕ್ಕನ ಮಗಳು ನಾರಾಯಣಮ್ಮನಿಗೆ ನನ್ನ ಮಗಳು ದೂರವಾಣಿ ಕರೆ ಮಾಡಿರುತ್ತಾಳೆ. ಆದರೆ ಅವರು ಮಲಗಿದ್ದ ಕಾರಣ ಕರೆಯನ್ನು ಸ್ವೀಕರಿಸಿರುವುದಿಲ್ಲ. ಮರುದಿನ ಬೆಳಗ್ಗೆ ಆರೋಪಿತ ಅಂದರೆ ನನ್ನ ಅಳಿಯ ರವಿ ನನ್ನ ಅಕ್ಕನ ಮೊಮ್ಮಗನಿಗೆ ದೂರವಾಣಿ ಕರೆ ಮಾಡಿ, ನನ್ನ ಮಗಳು ರೂಮಿನ ಬಾಗಿಲು ತೆಗೆಯುತ್ತಿಲ್ಲ, ರಾತ್ರಿ ಬಾಗಿಲು ಹಾಕಿಕೊಂಡವಳು ತೆಗೆದಿಲ್ಲ, ಬನ್ನಿ ಎಂದು ಕರೆದಿರುತ್ತಾನೆ. ನಾನು ರವಿಗೆ ನನ್ನ ಮಗಳಿಗೆ ಫೋನ್ ಕೊಡು ಮಾತನಾಡುತ್ತೇನೆ ಎಂದು ಹೇಳಿರುತ್ತೇನೆ. ಆದರೆ, ಅವನು ನನ್ನ ಮಗಳು ಬಾಗಿಲು ಹಾಕಿಕೊಂಡು ಒಳಗೆ ನೇಣು ಹಾಕಿಕೊಂಡಿರುತ್ತಾಳೆ ಎಂದು ಹೇಳಿರುತ್ತಾನೆ.

4. ನಂತರ ನಮ್ಮ ಕುಟುಂಬದವರೆಲ್ಲ ನವಗ್ರಾಮಕ್ಕೆ ಹೋಗಿ, ನನ್ನ ಮಗಳು ಮತ್ತು ಆರೋಪಿ ವಾಸವಿದ್ದ ಮನೆಗೆ ಹೋಗಿ ನೋಡಲಾಗಿ, ಆರೋಪಿತರ ಮನೆಯವರು ಬಾಗಿಲು ತೆರೆದಿರುವುದಾಗಿ ಹೇಳಿರುತ್ತಾರೆ. ನಾವು ಅಲ್ಲಿಗೆ ಹೋಗುವಷ್ಟರಲ್ಲಿ ಬಾಗಿಲು ತೆಗೆದಿರುತ್ತಾರೆ. ಬಾಗಿಲು ತೆರೆಯಲು ಪ್ರಯತ್ನ ಮಾಡಿರುವ ರೀತಿಯಲ್ಲಿ ಹಾರೆಯಿಂದ ಬಾಗಿಲಿನ ಮೇಲೆ ಗುರುತನ್ನು

ಮಾಡಿರುತ್ತಾರೆ. ನಾವು ಒಳಗಡೆ ಹೋಗಿ ನೋಡಿದಾಗ, ನನ್ನ ಮಗಳ ದೇಹವು ನೇಣು ಬಿಗಿದ ಸ್ಥಿತಿಯಲ್ಲಿ ಇದ್ದು, ಕಾಲುಗಳು ನೆಲವನ್ನು ತಾಕಿಕೊಂಡಂತೆ ಇದ್ದವು. ಪಾದಗಳ ಕೆಳಗೆ ಯಾವುದೇ ಜಾಗ ಇರಲಿಲ್ಲ.

5. ಈ ವಿಚಾರ ತಿಳಿದ ಕೂಡಲೇ ನಾವು ಕಗ್ಗಲೀಪುರ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಅಲ್ಲಿಗೆ ಹೋಗಿ ನನ್ನ ಮಗಳ ಸಾವು ಯಾವ ರೀತಿ ಆಗಿರುತ್ತದೆ ಎಂಬ ಬಗ್ಗೆ ದೂರನ್ನು ನನ್ನ ಅಳಿಯನ ವಿರುದ್ಧ ನೀಡಿರುತ್ತೇವೆ. ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳುವ ಸ್ವಭಾವದವಳಲ್ಲ, ಆದರೆ ಅವಳಿಗೆ ಹೊಡೆದು ಬಡೆದು ಕಿರುಕುಳ ನೀಡಿ ಸಾಯಿಸಲಾಗಿರುತ್ತದೆ. ಆದ ಕಾರಣ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಿ ಕೇಳಲಾಗಿ ಅದರಲ್ಲಿರುವ ಸಹಿಯನ್ನು ಗುರುತಿಸುತ್ತಾರೆ. ದೂರನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ಸದರಿ ದೂರಿಗೆ ನಾನು ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ.

6. ನಾವು ದೂರು ಕೊಟ್ಟ ನಂತರ ಪೊಲೀಸರು ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ಆರೋಪಿಯ ಮನೆಗೆ ಬಂದಿರುತ್ತಾರೆ. ಆಗ ನಾನು, ನನ್ನ ಗಂಡ, ನಮ್ಮ ಮನೆಯ ಇತರರು ಮತ್ತು ಇನ್ನೂ ಕೆಲವರು ಇದ್ದೇವು. ಪೊಲೀಸರಿಗೆ ನನ್ನ ಮಗಳ ಶವ ಕಂಡು ಬಂದ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಪೊಲೀಸರು ನನ್ನ ಮಗಳ ನೇಣು ಬಿಗಿದ ಸ್ಥಿತಿಯಲ್ಲಿ ದೊರಕಿದ ದೇಹವನ್ನು ಬಿಚ್ಚಿ ಕೆಳಗೆ ಇಳಿಸಿರುತ್ತಾರೆ. ಶವವನ್ನು ಸ್ಥಳದಿಂದ ಆ್ಯಂಬುಲೆನ್ಸ್ ನಲ್ಲಿ ತೆಗೆದುಕೊಂಡು ಹೋಗಿರುತ್ತಾರೆ. ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿರುತ್ತಾರೆ. ಸಾಕ್ಷಿ ತನ್ನ ಎಡಗೈ ಹೆಬ್ಬೆಟ್ಟಿನ ಗುರುತು ಇರುವ ಮತ್ತೊಂದು ದಾಖಲೆಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನನ್ನೊಂದಿಗೆ ಉಮೇಶ್, ಮೂರ್ತಿ ಸಹಿ ಮಾಡಿರುತ್ತಾರೆ. ಈಗ ತೋರಿಸಿದ ಭಾವಚಿತ್ರಗಳಲ್ಲಿರುವ ಶವ ನನ್ನ ಮಗಳು ಗೌರಮ್ಮಳದ್ದೆ ಆಗಿದೆ. ಸದರಿ ಭಾವಚಿತ್ರಗಳನ್ನು ನಿಶಾನೆ ಪಿ-3 ಮತ್ತು 4 ಎಂದು ಗುರುತಿಸಲಾಯಿತು.

7. ಆ ನಂತರ ಸುಮಾರು 6 ತಿಂಗಳುಗಳ ನಂತರ ನಾವು ಪೊಲೀಸ್ ಠಾಣೆಗೆ ನನ್ನ ಮಗಳ ವಿವಾಹವಾದ ಭಾವಚಿತ್ರಗಳನ್ನು ಕೊಡಲು ನಾನು ಮತ್ತು ನನ್ನ ಮಗ ಹೋಗಿರುತ್ತೇವೆ. ಪೊಲೀಸರು ಭಾವಚಿತ್ರಗಳನ್ನು ಕೊಟ್ಟಾಗ ನಮ್ಮ ಸಹಿಗಳನ್ನು ಬರವಣಿಗೆಗೆ ಪಡೆದುಕೊಂಡಿರುತ್ತಾರೆ. ಅಮಾನತು

ಮಹಜರ್‌ನ್ನು ನಿಶಾನೆ ಪಿ-5 ಎಂದು ಗುರುತಿಸಲಾಯಿತು. ನನ್ನ ಮಗಳ ವಿವಾಹದ ಭಾವಚಿತ್ರಗಳನ್ನು ನಿಶಾನೆ ಪಿ-6 ಮತ್ತು 7 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ವಿಚಾರಣೆ ಮಾಡಿ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಆರ್.ಆರ್. ವಕೀಲರಿಂದ ಆರೋಪಿಯ ಪರವಾಗಿಃ**

ಆರ್.ಆರ್ ವಕೀಲರು ಹಾಜರಿದ್ದು ಪಾಟೀ-ಸವಾಲು ಮಾಡಲು ತಮ್ಮ ಹಿರಿಯ ವಕೀಲರು ಹಾಜರಿಲ್ಲ ಸಮಯಾವಕಾಶ ನೀಡಲು ಕೇಳಿದ್ದು, ರೂ.500/- ಖರ್ಚಿನೊಂದಿಗೆ ಪಾಟೀ-ಸವಾಲನ್ನು ಮುಂದೂಡಲಾಯಿತು.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ಶ್ರೀ. ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.